ರೋಗಗ್ರಸ್ತ ಕೈಗಾರಿಕೆಗಳಿಗೆ ಸಬ್ಸಿಡಿ.

1236 (1006) ಶ್ರೀ ಹಾಲಪ್ಪ ವಿ.ಬಿ. (ಹಡಗಲಿ) :— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರೋಗಗ್ರಸ್ತ ಸಣ್ಣ ಕೈಗಾರಿಕೆಗಳಿಗೆ ಮಂಜೂರಾಗಿರುವ ಸಬ್ಸಿಡಿ ಹಣ ಎಷ್ಟು;

ಆ) ಆ ಪೈಕಿ ಬಿಡುಗಡೆ ಮಾಡಲಾಗಿರುವ ಸಬ್ಸಿಡಿ ಹಣವೆಷ್ಟು? (ವಿವರ ನೀಡುವುದು)

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕೆ ಸಚಿವರು) :—

ಅ) ಹೊಸ ಕೈಗಾರಿಕಾ ನೀತಿಯಂತೆ ಬಿ.ಸಿ. ವಲಯಗಳಲ್ಲಿರುವ ಅತೀ ಸಣ್ಣ ಕೈಗಾರಿಕೆಗಳಿಗೆ ಹಾಗೂ ಡಿ. ವಲಯದಲ್ಲಿನ ಅತಿ ಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ. ರೋಗಗ್ರಸ್ತವಾಗಿರುವ ಕೈಗಾರಿಕೆಗಳಿಗೆ ಸಹಾಯಧನ ಕೊಡುವ ಯೋಜನೆಗಳಿರುವುದಿಲ್ಲ. ಆದರೆ ರೋಗಗ್ರಸ್ತ ಕೈಗಾರಿಕೆಗಳಲ್ಲಿ ಪುನಶ್ಚೇತನಗೊಂಡ ಅಥವಾ ಪುನಶ್ಚೇತನಗೊಳ್ಳುವ ಕೈಗಾರಿಕೆಗಳಿಗೆ ಬೀಜಧನ ಸಾಲವನ್ನು ಒಂದು ಘಟಕಕ್ಕೆ ರೂ.2.50 ಲಕ್ಷ ಮೀರದಂತೆ ಮಂಜೂರು ಮಾಡಲಾಗುತ್ತದೆ. ದಿನಾಂಕ: 31-12-2001ರ ವರೆಗೆ 104 ರೋಗಗ್ರಸ್ತ ಘಟಕಗಳಿಗೆ ರೂ. 194,405 ಲಕ್ಷ ಬೀಜಧನ ಸಾಲವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ.

ಆ) ಆ ಬೀಜಧನ ಸಾಲ ಮಂಜೂರಾಗಿರುವ ಘಟಕಗಳಿಗೆ ಬೀಜಧನ ಸಾಲ ಬಿಡುಗಡೆ ಮಾಡಲಾಗುತ್ತಿದೆ. ಇದುವರೆಗೆ ಈ ಸಾಲಿನಲ್ಲಿ 7 ಘಟಕಗಳಿಗೆ ರೂ. 14.09 ಲಕ್ಷ ಬಿಡುಗಡೆ ಮಾಡಲಾಗಿದೆ.

ಜಿಂದಾಲ ಉಕ್ಕಿನ ಕಾರ್ಖಾನೆಗೆ ತೆರಿಗೆ ವಿನಾಯಿತಿ.

1237(1437) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಿಂದಾಲ ಉಕ್ಕಿನ ಕಾರ್ಖಾನೆಯಲ್ಲಿ ಉತ್ಪಾದನೆ ಮಾಡದೆ ಇರುವ ಸರಕುಗಳಿಗೆ ಅಂದರೆ ಕೋಲಾಷ್ಯನ್ ಮರು ಮಾರಾಟ ಮಾಡಲು ತೆರಿಗೆ ವಿನಾಯಿತಿ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಆ) ಆಗಿದ್ದಲ್ಲಿ, ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :—

ಅ) ಮೆ: ಜಿಂದಾಲ ವಿಜಯನಗರ ಸ್ಟೀಲ್ ಸಂಸ್ಥೆಯು ತನ್ನ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಬರುವ ಸಿದ್ಧವಸ್ತುಗಳು ಹಾಗೂ ಬೈಪ್ರಾಡಕ್ಟ್ಸ್ ಮತ್ತು ವೇಸ್ಟ್ ಬೈಪ್ರಾಡಕ್ಟ್ಸ್ ಕೋಲಾಫೈನ್ ಸೇರಿದಂತೆ ಇವುಗಳ ಮಾರಾಟದ ಮೇಲೆ ಮಾರಾಟ ತೆರಿಗೆ ವಿನಾಯಿತಿಯನ್ನು ಸರ್ಕಾರ ಆದೇಶ ಸಂಖ್ಯೆ: ಸಿಇ29 ಎಸ್‌ಟಿಬಿ : 94 ದಿನಾಂಕ: 11-10-94, 25-5-99 ಮತ್ತು 14-3-2001ರಂತೆ ನೀಡಲಾಗಿದೆ.

ಆ) ಮೇಲ್ಕಂಡ ಸರ್ಕಾರಿ ಆದೇಶವನ್ನು ಘಟಿಕವ್ಯ ಮಾರಾಟ ಮಾಡುವ ಎಲ್ಲಾ ಸಿದ್ಧವಸ್ತುಗಳು, ಬೈಪ್ರಾಡಕ್ಟ್ಸ್ ಮತ್ತು ವೇಸ್ಟ್ ಪ್ರಾಡಕ್ಟ್ಸ್ (ಕೋಲಾಫೈನ್ ಸೇರಿದಂತೆ) 14 ಮಾರ್ಚ್‌ಗಳವರೆಗೆ 6,500-00 ಕೋಟಿ ರೂ.ಗಳ ಮೂಲ ಸ್ವತ್ತುಗಳ ಗರಿಷ್ಠ ಮಿತಿ ಮೀರದಂತೆ ಉಪಯೋಗಿಸಿಕೊಳ್ಳಲು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಘಟಿಕವ್ಯ ಉಪಯೋಗಿಸಿಕೊಳ್ಳಬಹುದಾದ ವಿನಾಯಿತಿಯು ತಾನು ಮಾರಾಟ ಮಾಡುವ ವಸ್ತುಗಳ ಪ್ರಮಾಣದ ಆಧಾರದ ಮೇಲೆ ಇರುತ್ತದೆ.

ಜಿಂದಾಲ ಉಕ್ಕಿನ ಕಾರ್ಖಾನೆ ಉತ್ಪಾದನೆ ವಿವರ.

1238(1442) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01ನೇ ಸಾಲಿನಲ್ಲಿ ಜಿಂದಾಲ ಉಕ್ಕು ಕಾರ್ಖಾನೆಯನ್ನು ಕೋಲಫೈನ್ ಮರು ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ಸಂದಾಯವಾಗಿದೆ.

ಆ) ಈ ಕಾರ್ಖಾನೆಯಿಂದ 2000-01ರಲ್ಲಿ ಕೋಲಫೈನ್ ಮರು ಮಾರಾಟ ಮಾಡಿದ ವಹಿವಾಟು ಎಷ್ಟು; ಸದರಿ ವಹಿವಾಟಿನ ಮೇಲೆ ತೆರಿಗೆ ಕಟ್ಟಲಾಗಿದೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :—

ಅ) 2000-01ನೇ ಸಾಲಿನಲ್ಲಿ ರೂ. 150.00 ಲಕ್ಷಗಳನ್ನು ಜಿಂದಾಲ ಉಕ್ಕು ಕಾರ್ಖಾನೆ ಕೋಲಫೈನ್ ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡಿರುತ್ತದೆ. ಆದರೆ, ನ್ಯಾಯಾಲಯವು ಈ ಹಣವನ್ನು ಕಂಪೆನಿಯವರಿಗೆ ಹಿಂತಿರುಗಿಸಲು ಆದೇಶ ನೀಡಿದೆ.

ಆ) 2000-2001ನೇ ಸಾಲಿನಲ್ಲಿ ರೂ. 12, 594.00 ಲಕ್ಷಗಳು ಜಿಂದಾಲ್ ಉಕ್ಕು ಕಾರ್ಖಾನೆಯ ಕೋಲಫೈನ್ ಮಾರಾಟದ ವಹಿವಾಟು ಆಗಿರುತ್ತದೆ. Under protest ರೂ. 150.00 ಲಕ್ಷಗಳ ತೆರಿಗೆಯನ್ನು ಈ ವಹಿವಾಟಿನ ಮೇಲೆ ಕಂಪೆನಿಯು ಸಂದಾಯ ಮಾಡಿರುತ್ತದೆ.